ಜಡತ್ವದಿಂದ ಕ್ರಿಯಾಶೀಲತೆಯ ಕಡೆಗೆ

ಯಮುನಪ್ಪ, ಸೋಮಶೇಖರ್, ಶಾಖಾಂಬರಿ
ಮರಿಯಪ್ಪ, ಗೀತಾ, ಯಲ್ಲಗಿರಿಯಪ್ಪ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾರನಾಳ್
ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ

ಶಾಲೆಗಳ ಸಾಧನೆಯ ಮೌಲ್ಯಮಾಪನಕ್ಕೆ ಭದ್ರವೂ ನಿಖರವೂ ಆದ ಚೌಕಟ್ಟುಗಳು ಸಾಕಷ್ಟು ಇರಬಹುದು. ಆದರೆ, ಪ್ರತಿ ಶಾಲೆಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ಅದು ಆ ಶಾಲೆಯ ಗುಣಮಟ್ಟ ಏನು ಎಂಬುದರ ಸುಳಿವನ್ನು ನಮ್ಮ ಒಳನೋಟಕ್ಕೆ ಬಿಟ್ಟುಕೊಡುತ್ತದೆ. ನಾವು ಶಾಲೆ ಹಾಗೂ ಶಿಕ್ಷಕರ ಕುರಿತಾಗಿ ನಡೆಸಿದ ಅಧ್ಯಯನದಲ್ಲಿ ಕಠಿಣವಾದ ಮಾನದಂಡಗಳನ್ನು ಬಳಸಿ ಕಂಡುಕೊಂಡ ವಿಷಯಗಳು ನಿಜವೇ ಟೊಳ್ಳೇ ಎಂಬುದನ್ನು ಒರೆಹಚ್ಚುವುದರಲ್ಲಿ ಈ ಅಂತರ್‌ದೃಷ್ಟಿ ಮಹತ್ವದ ಪಾತ್ರ ವಹಿಸುತ್ತದೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ನಿರ್ದಿಷ್ಟ ಸಾಮಾಜಿಕ ಪರಿಸ್ಥಿತಿ ಹಾಗೂ ಅವು ಸವಾಲುಗಳ ಸನ್ನಿವೇಶದಲ್ಲಂತೂ ಈ ವಿಚಾರ ಇನ್ನಷ್ಟು ಸಹಾಯಕವಾಗುತ್ತದೆ. ಈ ರೀತಿಯ ಅಂತರ್ದೃಷ್ಟಿಯ ಸಮರ್ಥನೆಗಳಿಗೆ ಉಪಪತ್ತಿಗಳಿವೆ. ಉದಾಹರಣೆಗೆ, ಮಾರನಾಳ್ 'ಜಿಎಚ್‌ಪಿಎಸ್'ನಲ್ಲಿ ಶಿಕ್ಷಕರು ಬೆಳಗ್ಗೆ ಪ್ರಾರ್ಥನೆಗೆ ಮೊದಲು ಚರ್ಚೆಯಲ್ಲಿ ತೊಡಗಿದಂತೆ ಶಾಲೆ ಮುಚ್ಚುವ 4.30 ಗಂಟೆ ಸುಮಾರಿಗೆ ಕೂಡ ಸಂವಾದದಲ್ಲಿ ತೊಡಗಿದ್ದಾರೆ. ವಿಜ್ಞಾನದ ಶಿಕ್ಷಕರೂ ಸಮಾಜಶಾಸ್ತ್ರದ ಶಿಕ್ಷಕರೂ ಶಾಲೆಯ ಸಮಯ ಮೀರುತ್ತದೆ ಎನ್ನುವುದು ಗೊತ್ತಿದ್ದರೂ, ತರಗತಿಗಳಲ್ಲಿ ಕಲಿಕಾ ಸಾಧನಗಳನ್ನು ಬಳಸುತ್ತ ಬೋಧನೆಯಲ್ಲಿ ತಲ್ಲೀನರಾಗಿದ್ದಾರೆ. ಶಾಲೆಯ ಹಳೆಯ ವಿದ್ಯಾರ್ಥಿಗಳು ಮುಖ್ಯ ಶಿಕ್ಷಕರ ಅನುಮತಿ ಪಡೆದು, ಸಮುದಾಯದ ಕೆಲವರೊಂದಿಗೆ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದಾರೆ. ಶಾಲಾ ಕೊಠಡಿಯಲ್ಲಿದ್ದ ಮಕ್ಕಳ ಉತ್ಸಾಹ, ಆತ್ಮವಿಶ್ವಾಸ, ಕುತೂಹಲ ಮತ್ತು ತರಗತಿಯಲ್ಲಿ ತೊಡಗಿಸಿಕೊಳ್ಳುವಿಕೆ ಕೂಡ ಗಮನಾರ್ಹವಾಗಿದೆ. ಇದೆಲ್ಲದರ ಮೊತ್ತವು ಆ ಶಾಲೆಯ ಸಂತಸಕರ ವಾತಾವರಣವನ್ನು ಸೂಚಿಸುತ್ತದೆ. ನಾವು ಇದನ್ನು ಇನ್ನಷ್ಟು ಪರಿಶೀಲಿಸಿದರೆ, ಔಪಚಾರಿಕ ಚೌಕಟ್ಟುಗಳ ಮೂಲಕ ಕಾಣಿಸಿಕೊಂಡ ಸಕಾರಾತ್ಮಕ ಗುಣಮಟ್ಟದ ಲಕ್ಷಣಗಳು ಸುಸ್ಥಿರವಾದವುಗಳೇ ಆಗಿವೆ. ಏಕೆಂದರೆ, ಶಾಲೆಯಲ್ಲಿರುವ ಪೋಷಣಾತ್ಮಕ ಪರಿಸರವೂ ಪ್ರೋತ್ಸಾಹಕ ಸನ್ನಿವೇಶಗಳೂ ಇದಕ್ಕೆ ಕಾರಣ.

ಮಾರನಾಳ್ ಎಂಬ ಊರು ಮುಖ್ಯ ರಸ್ತೆಯಿಂದ ನಾಲ್ಕು ಕಿಲೋಮೀಟರ್ ಒಳಗೆ

ಇರುವ ಗ್ರಾಮ. ಜಮೀನಿಗೆ ನೀರಾವರಿ ಸೌಲಭ್ಯ ಇರುವುದರಿಂದ, ಅದು ಆರ್ಥಿಕವಾಗಿ ಭದ್ರವಾಗಿದೆ. ಆದರೆ, ಶೇ.50ರಷ್ಟು ಮಕ್ಕಳು ಮೊದಲನೇ ಪೀಳಿಗೆಯ ಕಲಿಕಾರ್ಥಿಗಳು. ಮಾರನಾಳ್ ಜಿಎಚ್‌ಪಿಎಸ್‌ನಲ್ಲಿ ಒಂದರಿಂದ ಎಂಟನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿದ್ದ 205 ಮಕ್ಕಳು ಹಾಗೂ ಮುಖ್ಯ ಶಿಕ್ಷಕ ಯಮುನಪ್ಪ ಸೇರಿದಂತೆ ಆರು ಶಿಕ್ಷಕರು ಇದ್ದಾರೆ. ಸುಮಾರು 50 ವರ್ಷದ ಮಧ್ಯಭಾಗದಲ್ಲಿರುವ ಯಮುನಪ್ಪ, 1984ರಲ್ಲಿ ಶಿಕ್ಷಣ ಇಲಾಖೆ ಸೇರಿದವರು. ಮುಖ್ಯ ಶಿಕ್ಷಕರಾಗಿ 23 ವರ್ಷ ಅನುಭವವಿರುವ(1995ರಿಂದ) ಅವರು ಪಕ್ಕದ ನಾರಾಯಣಪುರದಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿದ ಬಳಿಕ 2014ರಲ್ಲಿ ಮಾರನಾಳ್‌ಗೆ ಬಂದರು. ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಬೇಕೆಂಬುದನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವ ಹಾಗೂ ಜೊತೆಗಾರರನ್ನು ಬೆಂಬಲಿಸುವ ಅವರ ಕೆಲಸದ ವೈಖರಿಯನ್ನು ಮಾರನಾಳ್‌ನಲ್ಲಿ ನೋಡಬಹುದು. ಅವರ ಜೊತೆಗಾರರಲ್ಲಿ ಹೆಚ್ಚಿನವರು ಕಿರಿಯ ವಯಸ್ಸಿನವರು; ಯಮುನಪ್ಪನವರ ಜೊತೆ ಕೆಲಸ ಮಾಡುವುದನ್ನು ಅವರೆಲ್ಲ ಇಷ್ಟಪಡುತ್ತಾರೆ.

18 ವರ್ಷ ಸೇವೆ ಸಲ್ಲಿಸಿರುವ ಸಮಾಜ ವಿಜ್ಞಾನದ ಶಿಕ್ಷಕಿ ಶಾಖಾಂಬರಿ, ಈ ತಂಡದಲ್ಲಿಯೇ ಅತಿ ಹೆಚ್ಚು ಅನುಭವಿ. ಇಲ್ಲಿಗೆ ಬರುವ ಮುನ್ನ ಅವರು ಕೆಲಸದ ವಾತಾವರಣದಲ್ಲಿ ಕಿರುಕುಳವನ್ನು ಅನುಭವಿಸಿ ನೊಂದಿದ್ದರು. 2015ರಲ್ಲಿ ಮಾರನಾಳ್‌ಗೆ ಬಂದ ಬಳಿಕ ಇವರು ಮನಶ್ಶಾಂತಿಯನ್ನೂ ವೃತ್ತಿಯಲ್ಲಿ ಸಂತೋಷವನ್ನೂ ಕಂಡುಕೊಂಡಿದ್ದಾರೆ. ಅತ್ಯುತ್ಸಾಹಿ ವಿಜ್ಞಾನ ಶಿಕ್ಷಕ ಸೋಮಶೇಖರ್, 2010ರಿಂದ ಈ ಶಾಲೆಯಲ್ಲಿದ್ದಾರೆ. ಇದು ಅವರ ಮೊದಲ ನೇಮಕ. ಮರಿಯಪ್ಪ ಇತ್ತೀಚೆಗೆ ಅಂದರೆ, 2016ರಲ್ಲಿ ಸೇರಿದವರು. ಗೀತಾ ಹಿಂದಿಯನ್ನು ಕಲಿಸುತ್ತಿದ್ದಾರೆ. ಯಲ್ಲಗಿರಿಯಪ್ಪ ಒಂದರಿಂದ ಮೂರನೇ ತರಗತಿಗೆ ಕಲಿಸುತ್ತಿದ್ದು ನಲಿ–ಕಲಿ ಬೋಧನೆಯಲ್ಲೂ ಪಳಗಿದ್ದಾರೆ.

ಯಮುನಪ್ಪ ಇಡೀ ಶಾಲೆಯ ಬೆನ್ನೆಲುಬು. 2014ರಲ್ಲಿ ಅವರು ಇಲ್ಲಿಗೆ ಬಂದಾಗ, ಸಮುದಾಯದ ಸಹಕಾರವಿರಲಿಲ್ಲ, ಜೊತೆಗೆ ಶಿಕ್ಷಕರುಗಳ ಮಧ್ಯೆ ಅಸಮಾಧಾನಗಳಿದ್ದವು. ಇದೇ ಹೊತ್ತಿನಲ್ಲಿ ಶಾಲೆಯಿಂದ ನಾಲ್ವರು ಶಿಕ್ಷಕರನ್ನು ವರ್ಗಾವಣೆ ಮಾಡಲಾಗಿತ್ತು. ಸಮಾಜಘಾತಕ ಶಕ್ತಿಗಳು ಸಂಜೆ ವೇಳೆ ಯಾವುದೇ ಎಗ್ಗಿಲ್ಲದೆ ಶಾಲೆಯನ್ನು ಮದ್ಯಪಾನ ಗೋಷ್ಠಿಗಳಿಗೆ ಬಳಸಿಕೊಳ್ಳುತ್ತಿದ್ದರು: ಶೌಚಾಲಯಗಳು ಉಪಯೋಗಿಸಬಹುದಾದ ಸ್ಥಿತಿಯಲ್ಲಿ ಇರಲಿಲ್ಲ. ಶಾಲೆಯಲ್ಲಿ ಹಾಜರಿ ಶೇ.30ಕ್ಕಿಂತ ಕಡಿಮೆಯಿತ್ತು. ಅವ್ಯವಸ್ಥೆಯ ಆಗರವಾಗಿರುವ ಶಾಲೆಗಳನ್ನು ಸರಿಪಡಿಸಲು ಮುಂದಾಗುವ ಎಲ್ಲ ಶಿಕ್ಷಕರಂತೆಯೇ ಯಮುನಪ್ಪ ಕೂಡ ಸಮುದಾಯದ ಜೊತೆ ಸಂಬಂಧ ಬೆಳೆಸಿದರು. ಮೂಲಸೌಕರ್ಯ ಗಳನ್ನು ನಿರ್ಮಿಸಿದರು. ಶಾಲೆಯಲ್ಲಿ ಶಿಕ್ಷಕಿಯರೂ ಇದ್ದುದರಿಂದ, ಮೊದಲು ಅವರು ಮಾಡಬೇಕಿದ್ದ ಕೆಲಸ ಸ್ವಚ್ಛ, ಉಪಯೋಗಿಸಲು ತಕ್ಕುದಾದ ಶೌಚಾಲಯದ ನಿರ್ಮಾಣ. ತಕ್ಷಣದ ಅಗತ್ಯಗಳನ್ನು ಪೂರೈಸಿಕೊಳ್ಳಲು ಎಸ್‌ಡಿಎಂಸಿಯ ನೆರವು ಪಡೆದುಕೊಂಡರು. ಬಾಗಿಲುಗಳನ್ನು ದುರಸ್ತಿಗೊಳಿಸಿ ಭದ್ರಪಡಿಸಲಾಯಿತು, ಶಾಲೆಯನ್ನು ನವೀಕರಣ ಮಾಡಿದರು. ಗೋಡೆಗಳಿಗೆ ಹೊಸ ಬಣ್ಣ ಹಚ್ಚಿದರು. ಆಧಾರ್ ಕಾರ್ಡ್ ಬಳಸಿಕೊಂಡು ವಿದ್ಯಾರ್ಥಿಗಳ

ಸುಳ್ಳು ನೋಂದಣಿಗಳನ್ನು ಹಾಜರಿ ಪುಸ್ತಕದಿಂದ ತೆಗೆದುಹಾಕಿದರು.

ಯಮುನಪ್ಪ ಅವರನ್ನು ಶಿಕ್ಷಕರು ಬೆಂಬಲಿಸಿದರು. ಸಮುದಾಯದವರೊಂದಿಗೆ ಮಾತನಾಡಲು ಎಸ್‌ಡಿಎಂಸಿ ಸದಸ್ಯರು ನೆರವಾದರು. ಯಮುನಪ್ಪ ಶಾಲೆಯನ್ನು ನವೀಕರಿಸಿದ ರೀತಿ ಗ್ರಾಮಸ್ಥರ ಹೃದಯವನ್ನು ತಟ್ಟಿತು. ವಿರೋಧ ಸಾಕಷ್ಟು ಕಡಿಮೆಯಾಯಿತು. ಶಾಲೆ ಸುತ್ತ ಗಲಾಟೆ ಇಲ್ಲವೇ ಹೇಸಿಗೆ ಮಾಡಬಾರದೆಂದು ಯಮುನಪ್ಪ ಜನರನ್ನು ಎಚ್ಚರಿಸಿದರು. "ಇದರಿಂದ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತದೆ," ಎಂದರು. ಶಾಲೆಯೊಂದಿಗೆ ಉತ್ತಮ ಸಂಬಂಧ ಇರಿಸಿಕೊಳ್ಳಬೇಕೆಂದು ಗ್ರಾಮಸ್ಥರನ್ನು ಒಪ್ಪಿಸಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂಬುದು ತಮ್ಮ ಗುರಿ. ಇದರಿಂದ ಅವರು ಜೀವನದುದ್ದಕ್ಕೂ ಪ್ರಯೋಜನ ಪಡೆಯಲಿದ್ದಾರೆ ಎಂದು ಮನವರಿಕೆ ಮಾಡಿದರು. "ಇದು ಪ್ರಾಯಶಃ ನಮ್ಮ ಪ್ರಯತ್ನಗಳ ಪ್ರಮುಖ ಘಟ್ಟವಾಗಿತ್ತು. ಸಮುದಾಯದೊಂದಿಗೆ ಸಂಬಂಧ ಸ್ಥಾಪಿಸುವುದು ನಮಗೆ ಸಾಧ್ಯವಾಯಿತು. ಸಮುದಾಯ ಎನ್ನುವುದು ವಿಚಿತ್ರ – ಅದು ಉಗ್ರವಾಗಿ ವಿರೋಧಿಸಬಹುದು ಇಲ್ಲವೇ ಸಂಪೂರ್ಣ ಸಹಕಾರ ನೀಡಬಹುದು. ನಮ್ಮ ಕೆಲವು ಕೆಲಸಗಳಿಂದ ಶಾಲೆಯನ್ನು ಕುರಿತಾದ ಜನರ ಅಭಿಪ್ರಾಯ ಸಂಪೂರ್ಣ ಬದಲಾಯಿತು" ಎಂದು ಸಂತೋಷ, ಸಮಾಧಾನಗಳಿಂದ ನಿರಾಳರಾಗಿ ಯಮುನಪ್ಪ ಹೇಳುತ್ತಾರೆ.

ಅಷ್ಟರೊಳಗೆ ವರ್ಗಾವಣೆಯಾದ ಶಿಕ್ಷಕರ ಸ್ಥಾನವನ್ನು ಭರ್ತಿ ಮಾಡಿಸಿಕೊಳ್ಳುವಲ್ಲಿ ಯಮುನಪ್ಪ ಯಶಸ್ವಿಯಾಗಿದ್ದರು. ಅವರ ಅದೃಷ್ಟ ಚೆನ್ನಾಗಿತ್ತು. ಉತ್ಸಾಹಿ, ಆದರ್ಶವಾದಿ ಹಾಗೂ ಚೈತನ್ಯಶಾಲಿ ಯುವ ಶಿಕ್ಷಕರು ಸಿಕ್ಕಿದರು. ಒಟ್ಟಾಗಿ ಉತ್ತಮ ಶಾಲೆಯೊಂದನ್ನು ಸೃಷ್ಟಿಸುವ ಅವಕಾಶ ತಮ್ಮ ಮುಂದೆ ಇದೆ ಎನ್ನುವುದು ಅವರೆಲ್ಲರಿಗೂ ಗೊತ್ತಿತ್ತು. ಇದು ಶಿಕ್ಷಕರಲ್ಲಿ ಉತ್ಸಾಹವನ್ನೂ ಸಕಾರಾತ್ಮಕ ಭಾವನೆಯನ್ನೂ ತುಂಬಿತು. ಬೆಳಗಿನ ಪ್ರಾರ್ಥನೆ ಸಮಯವು ರೋಮಾಂಚಕರವಾದ ಶಾಲಾ ವಾತಾವರಣದ ಆರಂಭಕ್ಕೆ ಪ್ರತಿದಿನವೂ ನಾಂದಿಯಾಗತೊಡಗಿತು. ಶಾಲೆಯ ಪ್ರತಿ ಶಿಕ್ಷಕನೂ ವಿದ್ಯಾರ್ಥಿಗಳೂ ಸಮಯಕ್ಕೆ ಸರಿಯಾಗಿ ಆಗಮಿಸುತ್ತಿದ್ದರು. ಪ್ರಾರ್ಥನೆ ನಿಖರವಾಗಿ 9.30ಕ್ಕೆ ಆರಂಭವಾಗುತ್ತಿತ್ತು. ಮಾರನಾಳ್ ಶಾಲೆಯಲ್ಲಿ ನೀಡುವ ಬಿಸಿಯೂಟ ಅತ್ಯುತ್ತಮ ಗುಣಮಟ್ಟದ್ದು ಎಂದು ಅಕ್ಕಪಕ್ಕದ ಊರುಗಳಲ್ಲೂ ಹೆಸರು ಪಡೆದಿತ್ತು. ಯಮುನಪ್ಪ ಅವರ ಪ್ರಕಾರ, ಅಡುಗೆಯವರು ಹಾಗೂ ಸಹಾಯಕರು ಸ್ವಯಂಸ್ಫೂರ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ತಮ್ಮ ಕೆಲಸಕ್ಕೆ ಶಿಕ್ಷಕರ ಕೆಲಸದಷ್ಟೇ ಗೌರವವಿದೆ ಎನ್ನುವುದು ಅವರಿಗೆ ಗೊತ್ತಿತ್ತು. ಶಾಲೆಯಲ್ಲಿ ನಾನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ವಿದ್ಯಾರ್ಥಿಗಳ ಸಚಿವ ಸಂಪುಟವೊಂದನ್ನು ರಚಿಸಿ, ಜವಾಬ್ದಾರಿ ನೀಡಲಾಗಿತ್ತು. ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗುವ ಗುರಿಯಿಂದ ಖೋಖೋ ಮತ್ತು ಕಬಡ್ಡಿ ತಂಡಗಳನ್ನು ಕಟ್ಟಿದ್ದರು. ಶಾಲೆಯು ತಮ್ಮ ಮಕ್ಕಳನ್ನು ಹೇಗೆ ಪೋಷಿಸಿದೆ ಮತ್ತು ಅವರ ಸಾಮರ್ಥ್ಯವನ್ನು ಎಷ್ಟು ಬೆಳೆಸಿದೆ ಎನ್ನುವುದನ್ನು ನೋಡುವ ಅವಕಾಶವನ್ನು ಫೆಬ್ರವರಿಯಲ್ಲಿ ನಡೆಯುವ ವಾರ್ಷಿಕೋತ್ಸವವು ಗ್ರಾಮಸ್ಥರಿಗೆ ಕಲ್ಪಿಸುತ್ತಿತ್ತು. ವೇದಿಕೆಯ ಮೇಲೆ "ತಮ್ಮ ಮಕ್ಕಳು" ಪ್ರದರ್ಶನ ನೀಡುವುದು ಪೋಷಕರಾದಿಯಾಗಿ ಊರಿನ

ಸಮಸ್ತ ಜನತೆಗೆ ಹೆಮ್ಮೆಯ ವಿಷಯವಾಗಿತ್ತು. ಪ್ರತಿ ಶನಿವಾರ ಶಿಕ್ಷಕರು ತಮ್ಮ ತರಗತಿಗಳಲ್ಲಿನ ಅನುಭವ, ಸಾಧಿಸಿದ ಪ್ರಗತಿ ಮತ್ತು ಎದುರಾದ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿದ್ದರು. ಈ ಸಭೆಗಳ ವಿವರವನ್ನು ಪುಸ್ತಕವೊಂದರಲ್ಲಿ ವ್ಯವಸ್ಥಿತವಾಗಿ ದಾಖಲಿಸುತ್ತಿದ್ದರು. ಯಮುನಪ್ಪ ತರಗತಿಗಳನ್ನು ಗಮನಿಸುತ್ತಿದ್ದರಲ್ಲದೆ ತಮ್ಮ ಅಭಿಪ್ರಾಯಗಳನ್ನು ದಿನಚರಿಯಲ್ಲಿ ಬರೆದಿಡುತ್ತಿದ್ದರು. ಮಕ್ಕಳ ಪ್ರಗತಿಯನ್ನು ಕುರಿತು ತಿಳಿಸಲು ಶಾಲೆಯಲ್ಲಿ ಪೋಷಕರೊಂದಿಗೆ ನಿಯತಕಾಲಿಕ ಸಭೆಗಳನ್ನು ಸಂಘಟಿಸಿದರು.

ಯಮುನಪ್ಪ ಸುರಪುರದಲ್ಲಿ ಮುಖ್ಯ ಶಿಕ್ಷಕರಾಗಿದ್ದ ಕಾಲದಿಂದಲೂ ಫೌಂಡೇಷನ್ ಹಮ್ಮಿಕೊಳ್ಳುತ್ತಿದ್ದ ನಾನಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. 2004ರಲ್ಲಿ ಶಾಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕರಿಗೆ ಹಮ್ಮಿಕೊಂಡಿದ್ದ ಹತ್ತು ದಿನಗಳ ಕಾರ್ಯಕ್ರಮದಲ್ಲಿ ಹಾಗೂ ಅನಂತರ ಸಿಎಫ್ಎಸ್ಐ ಅಡಿ ನಡೆದ ಶಾಲೆಗಳ ಉತ್ತಮೀಕರಣ ಕುರಿತ ಕಾರ್ಯಾಗಾರಗಳಲ್ಲೂ ಅವರು ಭಾಗವಹಿಸಿದ್ದರು. 2011ರಲ್ಲಿ ಜಿಲ್ಲೆಯಲ್ಲಿ ಎಸ್ಎಲ್ಡಿಪಿ ಮತ್ತಿತರ ಸಾಮರ್ಥ್ಯ ನಿರ್ಮಾಣ ಕೋರ್ಸ್‌ಗಳನ್ನು ಆರಂಭಿಸಿದಾಗ ಅವುಗಳಲ್ಲಿ ಯಮುನಪ್ಪ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಕೋರ್ಸ್‌ಗಳಿಂದ ಪ್ರಯೋಜನ ಪಡೆದಿದ್ದ ಯಮುನಪ್ಪ, ತಮ್ಮ ಶಾಲೆಯ ಶಿಕ್ಷಕರು ಇವುಗಳಲ್ಲಿ ಪಾಲುಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು. ಸೋಮಶೇಖರ್, ಶಾಖಾಂಬರಿ ಮತ್ತು ಮರಿಯಪ್ಪ ವಿಟಿಎಫ್‌ನಲ್ಲಿ ಖಾಯಂ ಆಗಿ ಪಾಲ್ಗೊಳ್ಳುತ್ತಿದ್ದರು. ಅವರೆಲ್ಲ ಟಿಎಲ್‌ಸಿಯಲ್ಲಿ ಲಭ್ಯವಿರುವ ಸಂಪನ್ಮೂಲ ಸಾಧನಗಳು ಮತ್ತು ಗ್ರಂಥಾಲಯವನ್ನು ಬಳಸಿಕೊಳ್ಳುತ್ತಿದ್ದರು.

ವೈಯಕ್ತಿಕವಾಗಿ, ಈ ಎಲ್ಲ ಶಿಕ್ಷಕರೂ ತಮ್ಮ ಬೋಧನಾ ವಿಷಯದ ಮೇಲೂ ತರಗತಿಯಲ್ಲಿನ ಬೋಧನೆಯ ಮೇಲೂ ಸಂಪೂರ್ಣ ಹಿಡಿತ ಹೊಂದಿದ್ದಾರೆ. ವಿಜ್ಞಾನ ಶಿಕ್ಷಕ ಸೋಮಶೇಖರ್ ಪಾಠ ಮಾಡುವುದನ್ನು ಕೇಳುವುದೇ ಒಂದು ಸೊಗಸು. ಇವರ ಬೋಧನೆಯನ್ನು ನೋಡಿದವರು "ಇವರು ಜಿಲ್ಲೆಯಲ್ಲೇ ಅತ್ಯುತ್ತಮ ಶಿಕ್ಷಕರಾಗುವುದು ಖಂಡಿತ" ಎಂದು ಯಾವ ಹಿಂಜರಿಕೆಯೂ ಇಲ್ಲದೆ ಭರವಸೆಯಿಂದ ಭವಿಷ್ಯ ನುಡಿಯುತ್ತಾರೆ. ಅವರಿಗೆ ಪಿಯುಸಿಯಲ್ಲಿ ಬಂದಿದ್ದು ಶೇ.42 ಅಂಕ ಮಾತ್ರ ಎಂದು ತಿಳಿದರೆ ಯಾರಿಗಾದರೂ ಅಚ್ಚರಿಯಾಗುವುದೂ ಅಷ್ಟೇ ನಿಜ. ಬಿಎಸ್‌ಸಿ ಪದವಿ ಮಾಡುತ್ತಿದ್ದಾಗ ವಿಜ್ಞಾನದಲ್ಲಿ ಆಸಕ್ತಿ ಬೆಳೆದು, ವಿಜ್ಞಾನ ಶಿಕ್ಷಕನಾಗಬೇಕು ಎಂದು ನಿರ್ಧರಿಸಿದೆ ಎನ್ನುತ್ತಾರೆ ಅವರು. ಎಂಎಸ್‌ಸಿ ಹಾಗೂ ಬಿಎಡ್ ಮಾಡಿರುವುದರಿಂದ, ಉನ್ನತ ತರಗತಿಗಳಿಗೆ ಪಾಠ ಮಾಡುವ ಅರ್ಹತೆ ಇದ್ದರೂ, ಇವರಂಥ ಅನೇಕ ಶಿಕ್ಷಕರಿಗೆ ಇದು ಹೆಚ್ಚು ಮಹತ್ವಾಕಾಂಕ್ಷೆಯ ಸ್ಥಾನ. ಆದರೆ, ಫೌಂಡೇಷನ್‌ನ ಸದಸ್ಯರ ಜತೆಗಿನ ಸಂಪರ್ಕದ ಪರಿಣಾಮ, "ಬೋಧನೆ ಕುರಿತ ನನ್ನ ಮನೋಭಾವ ಮತ್ತು ರೀತಿ ಬದಲಾಗಿದ್ದು, ನಾನು ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪಾಠ ಮಾಡುವುದನ್ನು ಇಷ್ಟಪಡುತ್ತೇನೆ. ಅವರು ನನ್ನನ್ನು ಬೆಂಗಳೂರಿನ ಸೆಂಟರ್ ಫಾರ್ ಲರ್ನಿಂಗ್‌ಗೆ 5 ದಿನಗಳ ಮಟ್ಟಿಗೆ ಕಳಿಸಿದಾಗ, ಪಿಎಚ್‌ಡಿ ಮಾಡಿದವರು ನಾಲ್ಕು ಮತ್ತು ಐದನೇ ತರಗತಿಗೆ ಅತ್ಯಂತ ಉತ್ಸಾಹದಿಂದ ಪಾಠ ಮಾಡುತ್ತಿದ್ದುದನ್ನು ನೋಡಿದೆ. ಅದು

ನನ್ನನ್ನು ಸಂಪೂರ್ಣವಾಗಿ ಬದಲಿಸಿತು, ಪ್ರತಿ ತರಗತಿಯಲ್ಲೂ ಇದೇ ಉತ್ಸಾಹದಿಂದ ನಾನು ಬೋಧಿಸುವೆನೆಂದು ಅಂದೇ ಪ್ರತಿಜ್ಞೆ ಮಾಡಿದೆ" ಅನ್ನುತ್ತಾರೆ ಸೋಮಶೇಖರ್. ಅವರು ವಿಜ್ಞಾನ ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸಲು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾರೆ; ವೈಜ್ಞಾನಿಕ ಪ್ರಕ್ರಿಯೆಗಳ ಬಗ್ಗೆ ಅರಿವು ಮೂಡಿಸಲು ಪ್ರಯೋಗಗಳನ್ನೂ ಯೋಜನೆಗಳನ್ನೂ ರೂಪಿಸುತ್ತಾರೆ. ಸಣ್ಣ ಕಲಿಕಾ ಘಟಕಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಕಾರ್ಯ ನಿರ್ವಹಣಾ ಗುಂಪುಗಳನ್ನು ಸೃಷ್ಟಿಸುತ್ತಾರೆ. ಟಿಎಲ್‌ಸಿ ಮತ್ತು ವಿಟಿಎಫ್‌ಗಳಲ್ಲಿ ನಿಯಮಿತವಾಗಿ ಪಾಲ್ಗೊಳ್ಳುವುದರಿಂದ, ಅಲ್ಲಿರುವ ಕಲಿಕಾ ಸಾಧನಗಳ ಬಳಕೆ ಹಾಗೂ ಅನುಭವಿ ಶಿಕ್ಷಕರ ಮುಖಾಮುಖಿಯಿಂದ ತಮಗೆ ಪ್ರಯೋಜನವಾಗಿದೆ; ಇದನ್ನು ತರಗತಿಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಅವರ ತರಗತಿಯನ್ನು ಗಮನಿಸಿದಾಗ ಎರಡು ವಿಷಯ ಗೊತ್ತಾಗುತ್ತದೆ – ಮೊದಲನೆಯದು – ಮಕ್ಕಳು ನಾನಾ ಸಾಧನಗಳನ್ನು ಯಾವುದೇ ಭಯವಿಲ್ಲದೆ ಬಳಸುತ್ತಾರೆ, ಜೊತೆಗೆ ಅವರು ಯಾವ ಅಳುಕೂ ಇಲ್ಲದೆ ಪರಸ್ಪರ ವಿಚಾರ ವಿನಿಮಯ ಮಾಡುತ್ತ, ಪರಸ್ಪರ ಸಹಕಾರದಿಂದ ಕೆಲಸ ಮಾಡುತ್ತಾರೆ. ಎರಡನೆಯದು – ಮಕ್ಕಳಲ್ಲಿ ಯೋಚನಾಶಕ್ತಿಯನ್ನು ಪ್ರಚೋದಿಸುವಂತಹ ಪ್ರಶ್ನೆಗಳನ್ನು ಸೋಮಶೇಖರ್ ಕೇಳುತ್ತಾರೆ. ಮಕ್ಕಳು ತಮ್ಮ ಕಲಿಕೆಯ ಸಾರಾಂಶವನ್ನು ಸಿದ್ಧಪಡಿಸುವುದಕ್ಕೆ ಮುನ್ನ ತಮ್ಮದೇ ವಾದಸರಣಿಯನ್ನೂ ವಿಚಾರಧಾರೆಯನ್ನೂ ಸಿದ್ಧಪಡಿಸುತ್ತಾರೆ. "ಉನ್ನತ ದರ್ಜೆಯ ಚಿಂತನೆಯನ್ನು ಉತ್ತೇಜಿಸುವುದು ಇದರ ಉದ್ದೇಶ" ಎನ್ನುತ್ತಾರೆ ಸೋಮಶೇಖರ್.

ನಾವು ಶಾಖಾಂಬರಿ ಅವರ ತರಗತಿಯಲ್ಲಿ ಕಾಲಿಟ್ಟಾಗ, ಶಿಕ್ಷಕಿ ಶೈಕ್ಷಣಿಕ ಸಾಧನಗಳ ಪರಿಣಾಮಕಾರಿ ಬಳಕೆಯಲ್ಲಿ ಬಹಳಷ್ಟು ಪಳಗಿರುವುದನ್ನು ಖುದ್ದಾಗಿ ಕಂಡೆವು. ಅವರು ಭೂಗೋಳ ಮತ್ತು ಭೂಪಟಗಳನ್ನು ಬಳಸಿಕೊಂಡು ಮಕ್ಕಳು ಕ್ಷಣಮಾತ್ರದಲ್ಲೇ ವಿಷಯದೊಡನೆ ಸಂಬಂಧವನ್ನು ಬೆಳೆಸುವಂತೆ ಮಾಡುತ್ತಿದ್ದರು. ಮಕ್ಕಳು ವಿಷಯದಲ್ಲಿ ಆಸಕ್ತಿ ಉಳಿಸಿಕೊಳ್ಳಬೇಕೆಂದರೆ, ಪ್ರಸ್ತುತ ಜ್ಞಾನದ ಮೂಲಕ ಹೊಸ ಕಲಿಕೆಯನ್ನು ಸಾಧ್ಯವಾಗಿಸಬೇಕು ಮಾರನಾಳ್ ಶಾಲೆಯ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿದರೆ ಉಳಿದ ಎಲ್ಲ ಶಿಕ್ಷಕರೂ ಕಂಪ್ಯೂಟರ್ ಮತ್ತು ಅಂತರ್ಜಾಲ ಬಳಕೆಯಲ್ಲಿ ಪರಿಣತರಿದ್ದಾರೆ, ಇದು ಈ ಶಾಲೆಯ ಮಕ್ಕಳಿಗೆ ಇರುವ ಒಂದು ದೊಡ್ಡ ಅನುಕೂಲ. ಯಮುನಪ್ಪ ಅವರು ನಿರ್ಮಿಸಿದ ಹೆಚ್ಚುವರಿ ಕೊಠಡಿಗಳಲ್ಲಿ ಒಂದನ್ನು ಕಂಪ್ಯೂಟರ್ ಕೋಣೆಯಾಗಿ ಮಾಡಿಕೊಂಡು ಐದರಿಂದ ಆರು ಕಂಪ್ಯೂಟರ್ ಇರಿಸಿ, ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕಲಿಕೆ ಮತ್ತು ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಅನೇಕ ಶಾಲೆಗಳಲ್ಲಿ ಇಂಥ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಿಲ್ಲ. ಆದರೆ, ಮಾರನಾಳ್ ಶಾಲೆಯ ಮಕ್ಕಳು, ಶಿಕ್ಷಕರಿಂದ ಕಂಪ್ಯೂಟರ್ ಬಳಸುವುದನ್ನು ಕಲಿತಿದ್ದಾರೆ. ಶಿಕ್ಷಕರೂ ಮಕ್ಕಳೂ ಸೇರಿ ತಮ್ಮ ಪ್ರಾಜೆಕ್ಟ್‌ಗಳ ಪವರ್ ಪಾಯಿಂಟ್ ಪ್ರಾತ್ಯಕ್ಷಿಕೆಗಳನ್ನು ಸೃಷ್ಟಿಸಿದ್ದಾರೆ. ಜಡವಾಗಿದ್ದ ಶಾಲೆ ಕೇವಲ ಮೂರು ವರ್ಷಗಳಲ್ಲಿ ಜೀವಂತಿಕೆಯಿಂದ ನಳನಳಿಸತೊಡಗಿದೆ. ಅಲ್ಲಿ ಉತ್ಸಾಹವೂ ಸಂತಸವೂ ತುಂಬಿದ ಎಳೆಯ ಜೀವಗಳ

ಕಲಕಲ ನಿನಾದ ಹಬ್ಬಿದೆ. ಆ ಸಂಸ್ಥೆ ಮತ್ತೆ ಶ್ರೇಷ್ಠತೆಯನ್ನು ಸಾಧಿಸುವಂತೆ ಅಲ್ಲಿನ ಶಿಕ್ಷಕರು ನೋಡಿಕೊಳ್ಳುತ್ತಿದ್ದಾರೆ. ಮುಂದಿನ ಕೆಎಸ್‌ಕ್ಯುಎಎಸಿ ಮೌಲ್ಯಮಾಪನವು ತಮ್ಮ ಸಹೋದ್ಯೋಗಿಗಳ ಕಠಿಣ ಶ್ರಮವನ್ನು ಪ್ರತಿಫಲಿಸುತ್ತದೆ ಎನ್ನುವ ವಿಶ್ವಾಸವನ್ನು ಯಮುನಪ್ಪ ಹೊಂದಿದ್ದಾರೆ. ಅವರು ಸಮಚಿತ್ತದಿಂದ, ಆದರೆ ದೃಢವಾಗಿ ಹೇಳಿದ ಮಾತು: "ನಾವು ಉತ್ತಮ ಸಾಧನೆ ಮಾಡುತ್ತೇವೆ."
